ಕಲ್ಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿರುವ ಬಸವರಾಜ ಪಿ. ಡೋಣೂರ, ಬಸವನಬಾಗೇವಾಡಿ ತಾಲೂಕಿನ ಸಾತಿಹಾಳ ಗ್ರಾಮದವರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಹಾಪ್‌ಕಿನ್ಸ್ ಮತ್ತು ಬಸವಣ್ಣ' ವಿಷಯದ ಬಗ್ಗೆ ತುಲನಾತ್ಮಕ ಅಧ್ಯಯನ ನಡೆಸಿದ್ದಾರೆ. ಕಥೆ, ಕಾದಂಬರಿ ಮತ್ತು ವಿಮರ್ಶಾ ಕ್ಷೇತ್ರದಲ್ಲಿ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.

ಆತ್ಮಹತ್ಯೆಗೆ ಇರಬಹುದಾದ ಕಾರಣಗಳನ್ನು ಪತ್ತೆ ಮಾಡಲು ಬಂದವರೇ ಹೆಚ್ಚು ಜನರಿದ್ದರು.

ಅಧಿಕಾರಿಗಳು ಕೋಣೆಯಲ್ಲಿ ನೆರೆದ ಜನರನ್ನು ಹೊರಗೆ ಕಳಿಸಿ, ಕೋಣೆಯ ಕಿಟಕಿ ಬಾಗಿಲು ಮುಚ್ಚಿ ಪರಿಶೀಲನೆ ನಡೆಸಿದರು. ಮನೆಯ ಕಿಟಕಿ ಮತ್ತು ಬಾಗಿಲುಗಳ ಹತ್ತಿರ ನಿಂತ ಜನರನ್ನು ಪೊಲೀಸರು ಬೆದರಿಸಿ ಮನೆಯ ಕಾಂಪೌಂಡ್ ಆಚೆ ಕಳಿಸಿದರು.

ಎರಡು ವಾರಗಳ ಹಿಂದೆ ಮಂತ್ರಿ ಬಹಳ ಸಂಭ್ರಮದಿಂದ ತಮ್ಮ ಆತ್ಮಚರಿತ್ರೆಯನ್ನು ಬಿಡುಗಡೆ ಮಾಡಿಸಿದ್ದರು. ನಾಡಿನ ಹಿರಿಯ ಲೇಖಕರು, ಪ್ರಕಾಶಕರು ಮತ್ತು ವಿಮರ್ಶಕರನ್ನು ಬಿಡುಗಡೆ ಸಮಾರಂಭಕ್ಕೆ ಆಹ್ವಾನಿಸಿದ್ದರು. ಬಂದು ಹೋಗಲು ವಾಹನದ ವ್ಯವಸ್ಥೆ, ಇಳಿದುಕೊಳ್ಳಲು ಐಷಾರಾಮಿ ಹೋಟೆಲ್, ತಿನ್ನಲು, ಕುಡಿಯಲು ಕಡಿಮೆ ಬೀಳದಂತೆ ಪ್ರತಿಯೊಂದನ್ನೂ ತಾವೇ ಮುಂದೆ ನಿಂತು ವ್ಯವಸ್ಥೆ ಮಾಡಿಸಿದ್ದರು. ಸಾಲದ್ದಕ್ಕೆ ಕಾರ್ಯಕ್ರಮ ಮುಗಿಸಿ ಹೊರಟು ನಿಂತ ಪ್ರತಿಯೊಬ್ಬ ಅತಿಥಿಗೆ ಇಪ್ಪತ್ತು ಸಾವಿರ ಸಂಭಾವನೆ ನೀಡಿದ್ದರು. ಇಷ್ಟು ಸಾಕಲ್ಲವೇ ನಮ್ಮ ಶ್ರೇಷ್ಠ ಸಾಹಿತಿಗಳಿಗೆ ಒಬ್ಬನನ್ನು ಹೊಗಳಿ ಅಟ್ಟಕ್ಕೆ ಏರಿಸಲು! ಇಂದ್ರ, ಚಂದ್ರ ಎಂದು ಬಣ್ಣಿಸಿ ಅಗ್ಗದ ಪ್ರಚಾರ ನೀಡಿ ಮೂರ್ಖರಿಗೆ ಪಟ್ಟ ಕಟ್ಟಲು!

'ಮಂತ್ರಿಗಳು ತಮ್ಮ ಆತ್ಮಚರಿತ್ರೆಯಲ್ಲಿ ಬಳಸಿದ ಭಾಷೆ ವಿಸ್ಮಯ ಹುಟ್ಟಿಸುವಂಥದ್ದು. ಅವರು ಕನ್ನಡ ಆತ್ಮಚರಿತ್ರೆಗೆ ಹೊಸ ಭಾಷೆಯನ್ನು ಹುಟ್ಟು ಹಾಕಿದರು' ಎಂದು ಒಬ್ಬ ಲೇಖಕ ಹೇಳಿದರೆ, 'ಇದು ಮಾದರಿ ಆತ್ಮಚರಿತ್ರೆ. ಆತ್ಮಚರಿತ್ರೆ ಪ್ರಕಾರದ ಸಾಧ್ಯತೆಗಳನ್ನು ವಿಸ್ತರಿಸಿದ ಅನನ್ಯ ಕೃತಿ' ಎಂದು ಒಬ್ಬ ಪ್ರಸಿದ್ಧ ವಿಮರ್ಶಕ ಹೇಳಿದ. ಇಬ್ಬರನ್ನು ಮೀರಿಸುವಂತೆ 'ಗಾಂಧೀಜಿಯ ಆತ್ಮಚರಿತ್ರೆಗೆ ಹೋಲಿಸಬಹುದಾದ ಆತ್ಮಚರಿತ್ರೆ ಇದಾಗಿದೆ' ಎಂದು ಖ್ಯಾತ ಅಂಕಣಕಾರ ಹೇಳಿದ. ಹೀಗೆ ನ ಭೂತೋ ನ ಭವಿಷ್ಯತಿ ಎಂಬಂತೆ ಆತ್ಮಚರಿತ್ರೆ ಬಿಡುಗಡೆ ಸಮಾರಂಭ ನಡೆಯಿತು. ಮಂತ್ರಿಗಳ ಮನಸ್ಸಿಗೆ ಅತೀವ ಆನಂದವಾಯಿತು. ಸಾಹಿತಿಗಳ ಮಾತು ಕೇಳಿ ಅವರ ಹೊಟ್ಟೆ ತುಂಬಿ ಹೋಗಿತ್ತು. ಅಂದು ಅವರು ಊಟವನ್ನೇ ಮಾಡಲಿಲ್ಲ.

ಕಾರ್ಯಕ್ರಮ ಮುಗಿಸಿ ಮನೆಗೆ ಬಂದು ತಮ್ಮ ಬಂಧು-ಬಳಗವನ್ನು ಸುತ್ತಲೂ ಕೂಡಿಸಿಕೊಂಡು ಕಾರ್ಯಕ್ರಮದ ಕುರಿತು ಮನಸ್ಸು ತುಂಬಿ ಬರುವವರೆಗೆ ಮಂತ್ರಿಗಳು ಮಾತನಾಡಿದರು. ಎಲ್ಲರಿಗೂ ತಾವೇ ಊಟ ಬಡಿಸಿದರು. ಆದರೆ, ತಾವು ಮಾತ್ರ ಒಂದು ತುತ್ತೂ ಬಾಯಿಗೆ ಒಯ್ಯಲಿಲ್ಲ. ಸರಿ ರಾತ್ರಿಗೆ ಹಾಸಿಗೆಗೆ ಹೋದರು. ಆದರೆ, ನಿದ್ರೆ ಮಾತ್ರ ಅವರ ಹತ್ತಿರ ಸುಳಿಯಲಿಲ್ಲ. ಏಕೆಂದರೆ ಅವರ ಮನಸ್ಸಿನಲ್ಲಿ ಒಂದು ಚಿಂತೆ ಕೊರೆಯುತ್ತಿತ್ತು. ಈ ಆತ್ಮಚರಿತ್ರೆ ನಿಜಕ್ಕೂ ತಮ್ಮ ಆತ್ಮಚರಿತ್ರೆಯೆ? ಇದು ತಾನೇ ಬರೆದ ಆತ್ಮಚರಿತ್ರೆಯೆ? ಇಲ್ಲಿ ದಾಖಲಾದದ್ದು ತಮ್ಮ ಬದುಕೆ? ತಾವು ಬದುಕಿದ್ದು ಹೀಗೆಯೇ? ತಾನು ಈ ಕೃತಿಯ ಪ್ರತಿಯೊಂದು ಶಬ್ದ ಬರೆದೆನೆಯೆ? ಇಂಥ ಅನೇಕ ಪ್ರಶ್ನೆಗಳನ್ನು ಮಂತ್ರಿಗಳ ಮನಸ್ಸು ಕೇಳಿತು. ಅವರ ಮನಸ್ಸಿನ ಶಾಂತಿ ಕದಡುವಂತೆ ಅವರ ಅಂತರಾತ್ಮ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳಿತು. 'ಇಂಥ ಬೃಹತ್ ಆತ್ಮಚರಿತ್ರೆ ನಿನ್ನ ಹೆಸರಿನಲ್ಲಿ ಪ್ರಕಟಗೊಂಡಿದೆ. ಆದರೆ, ಈ ಬೃಹತ್ ಗ್ರಂಥದಲ್ಲಿ ನೀನು ಬರೆದ ಒಂದು ಸಾಲಾದರೂ ಇದೆಯೆ? ಇದು ನಿನ್ನ ಬದುಕಿನ ಕಥನ ಅಲ್ಲವೆಂದು, ಇದರಲ್ಲಿ ನೀನು ಬರೆದ ಶಬ್ದವೂ ಇಲ್ಲವೆಂದು ನಿನಗೆ ಗೊತ್ತಿಲ್ಲವೆ? ಯಾರೋ ಬರೆದ ಕೃತಿಯನ್ನು ನಿನ್ನ ಹೆಸರಿನಿಂದ ಪ್ರಕಟಿಸಿದ್ದರಲ್ಲಿ ಯಾವ ನೈತಿಕತೆ ಇದೆ? ಆತ್ಮಚರಿತ್ರೆಯಲ್ಲಿ ದಾಖಲಾದ ಸಂಗತಿಗಳಿಗೂ ನಿನ್ನ